# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 780 |
| ಸದಸ್ಯರ ಹೆಸರು | : | ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20.09.2022. |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ:12.04.2021ರ ಶಿವಮೊಗ್ಗ ಮಹಾನಗರಪಾಲಿಕೆ ಸಾಮಾನ್ಯ ಸಭೆಯ ವಿಷಯ ಸಂ:17ರ ಬಗ್ಗೆ ಆದ ಅಚಾತುರ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿಲ್ಲ. |
| ಆ) | ಮಾನ್ಯ ಮೇಯರ್, ಮಹಾನಗರ ಪಾಲಿಕೆ ಆಯುಕ್ತರ ಗಮನಕ್ಕೆ ಬಾರದೇ, ವಿಷಯ ಸಂ:17 (ಶಿವಮೊಗ್ಗದ ಬ್ಯಾರಿಸ್ ಮಾಲ್ ಅವಧಿ ವಿಸ್ತರಿಸುವ ಬಗ್ಗೆ) ಸಾಮಾನ್ಯ ಸಭೆಯ ಅಜೆಂಡಾದಲ್ಲಿ ತಂದು ಕೆಲ ನೌಕರರು ಅಧಿಕಾರ ದುರ್ಬಳಕೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿಲ್ಲ. |
| ಇ) | ಈ ಬಗ್ಗೆ ಸಾಮಾನ್ಯ ಸಭೆಯಲ್ಲಿ ಕೋಲಾಹಲ ಉಂಟಾಗಿದ್ದಲ್ಲದೇ ನಗರದ ನಾಗರೀಕರಿಂದಲೂ ಸಹ ತೀವ್ರ ವಿರೋಧ ವ್ಯಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿಲ್ಲ. |
| ಈ) | ಮಾನ್ಯ ಮೇಯರ್, ಮಾನ್ಯ ಆಯುಕ್ತರ ಅನುಮತಿ ಇಲ್ಲದೆ ಈ ತರಹದ ವಿಷಯವನ್ನು ಸಾಮಾನ್ಯ ಸಭೆಯಲ್ಲಿ ತರುವುದು ಕಾನೂನು ಬಾಹಿರವಲ್ಲವೇ; | ಹೌದು, ಮಾನ್ಯ ಮೇಯರ್ ಹಾಗೂ ಆಯುಕ್ತರ ಅನುಮತಿ ಇಲ್ಲದೆ ಯಾವುದೇ ವಿಷಯವನ್ನು ಸಾಮಾನ್ಯ ಸಭೆಯಲ್ಲಿ ತರುವುದು ಕಾನೂನು ಬಾಹಿರವಾಗುತ್ತದೆ. |
| ಉ) | ಈ ತರಹದ ಕಾನೂನು ಉಲ್ಲಂಘಿಸಿರುವ ಯಾವ, ಯಾವ ಅಧಿಕಾರಿಗಳ ಮೇಲೆ ಯಾವ ಕಾನೂನು ಕ್ರಮ ಕೈಗೊಂಡಿರುತ್ತದೆ? (ದಾಖಲಾದ ಪ್ರಕರಣದೊಂದಿಗೆ ವಿವರವಾದ ಮಾಹಿತಿ ನೀಡುವುದು). | ಶಿವಮೊಗ್ಗ ಮಹಾನಗರಪಾಲಿಕೆ ವ್ಯಾಪ್ತಿಯ ಶಿವಪ್ಪ ನಾಯಕ ಮಾರುಕಟ್ಟೆಯ(ಬ್ಯಾರಿಸ್ ಮಾಲ್) ಲೀಸ್ ಅವಧಿಯನ್ನು ವಿಸ್ತರಿಸುವ ಬಗ್ಗೆ ವಿಷಯ ನಂ.17ನ್ನು ದಿನಾಂಕ:12.04.2022ರ ಶಿವಮೊಗ್ಗ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಕಾನೂನು ಬಾಹಿರವಾಗಿ ಮಂಡಿಸಿರುವ ವಿಚಾರವನ್ನು ಕೂಲಂಕಷವಾಗಿ ತನಿಖೆ ನಡೆಸಿ ವರದಿ ನೀಡಲು ಮಹಾಪೌರರು ಸರ್ವಪಕ್ಷದ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿರುತ್ತಾರೆ. ಅದರಂತೆ ಸದರಿ ಸಮಿತಿಯು ವಿವಿಧ ಸಭೆಗಳನ್ನು ನಡೆಸಿ ವಿಷಯ ನಂ.17ನ್ನು ಸಭೆಗೆ ಮಂಡಿಸಿರುವ ವಿಚಾರದ ಕುರಿತು ತನಿಖೆ ನಡೆಸಿ, ದಿನಾಂಕ:15.07.2022ರಂದು ಮಹಾಪೌರರಿಗೆ ವರದಿಯನ್ನು ಸಲ್ಲಿಸಲಾಗಿರುತ್ತದೆ.<br><br>ವಿಷಯ ಸಂಖ್ಯೆ:17ನ್ನು ಮಹಾಪೌರರ ಹಾಗೂ ಆಯುಕ್ತರ ಗಮನಕ್ಕೆ ತರದೇ ಸಭೆಗೆ ಮಂಡಿಸಿರುವುದು ತಪ್ಪಾಗಿರುವುದಾಗಿ ಸಭಾ ವಿಭಾಗದ ವಿಷಯ ನಿರ್ವಾಹಕರು ಒಪ್ಪಿಕೊಂಡಿರುವುದು ಸಮಿತಿಯ ವರದಿಯಿಂದ ತಿಳಿದು ಬಂದಿರುತ್ತದ್ದೆ. ಸದರಿ ಸಭಾ |

| | | |
|---|---|---|
| | | ವಿಭಾಗದ ವಿಷಯ ನಿರ್ವಾಹಕರಾದ ಶ್ರೀ ಜುಬೇರುಲ್ಲಾ ರವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲು ಈಗಾಗಲೇ ಸದರಿ ನೌಕರರಿಗೆ ದಿನಾಂಕ:05.09.2022 ರಂದು ಕಾರಣ ಕೇಳಿ ನೋಟೀಸನ್ನು ಶಿವಮೊಗ್ಗ ಮಹಾನಗರಪಾಲಿಕೆಯ ಆಯುಕ್ತ ರಿಂದ ಜಾರಿ ಮಾಡಲಾಗಿರುತ್ತದೆ. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ಮತ್ತು ನಿಯಂತ್ರಣ ಅಪೀಲು) 1957ರ ನಿಯಮಗಳಂತೆ ಶಿಸ್ತು ಕ್ರಮ ಜರುಗಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ನಅಇ 36 ಶಿಮಪಾ 2022(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು